- - ಓ ಎಸ್ ನಂ. 101/2022

ಪಿ.ಡಬ್ಲ್ಯೂ :1

ದಿನಾಂಕ : 02-04-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ . ಕೆ ಎಂ ಎಸ್ ವಕೀಲರಿಂದಃ

ದಾವಾ ಸ್ವತ್ತುಗಳಲ್ಲಿ ಮೊದಲು ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ . ನನ್ನ ತಂದೆ ತಾಯಿ ಅವಿದ್ಯಾವಂತರು ಎಂದರೆ ಸರಿ . ನನ್ನ ತಂದೆ ಮಧುಮೇಹದಿಂದ ನರಳುತ್ತಿದ್ದರು ಎಂದರೆ ಸರಿ . ಕಾಯಿಲೆ ಉಲ್ಬಣಗೊಂಡು ಎಡಗಾಲನ್ನು ಮಂಡಿಯವರೆಗೆ ಕತ್ತರಿಸಲಾಗಿತ್ತು ಎಂದರೆ ಸರಿ . ನನ್ನ ತಾಯಿಯೂ ಸಹಾ ಕಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿ .

1 ನೇ ಪ್ರತಿವಾದಿಯು 1975 ರಿಂದ ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ಆ ನಂತರ ಸದರಿ ಇಲಾಖೆಯಲ್ಲಿ ಅವರ ನೌಕರಿ ಖಾಯಂ ಆಗಿದೆ ಎಂದರೆ ಸರಿ . ಅವರು ತಮಗೆ ಬರುತ್ತಿದ್ದ ಆದಾಯದಿಂದ ಮನೆ ನಿರ್ವಹಣೆ ಮಾಡುತ್ತಿದ್ದರು ಎಂದರೆ ನಾವು ಸಹಾ ಮಾಡುತ್ತಿದ್ದೆವು ಎಂದು ಸಾಕ್ಷಿ ತಿಳಿಸಿದ್ದಾರೆ . ನನ್ನ ತಂಗಿ ಮಂಗಳಗೌರಮ್ಮ ರವರಿಗೆ 1 ನೇ ಪ್ರತಿವಾದಿಯು ವಿವಾಹ ಮಾಡಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆ ಮಾಡಿದ್ದಾರೆ ನಾವೆಲ್ಲರೂ ಸೇರಿ ಮದುವೆ ಮಾಡಿದ್ದೇವೆ ಎಂದು ತಿಳಿಸಿದ್ದಾರೆ . ವಿವಾಹದ ಖರ್ಚು ವೆಚ್ಚಗಳನ್ನು 1 ನೇ ಪ್ರತಿವಾದಿಯು ಭರಿಸಿದ್ದಾರೆ ಎಂದರೆ ಸಾಕ್ಷಿಯು ನಾವು ಸಹಾ ಭರಿಸಿದ್ದೇವೆ ಎಂದು ಸಾಕ್ಷಿ ತಿಳಿಸಿದ್ದಾರೆ . ನನ್ನ ತಂದೆ ದಿಃ 25-11-2002 ರಂದು ಮತ್ತು ದಿಃ 29-10-2006 ರಂದು ಮರಣ ಹೊಂದಿದ್ದಾರೆ ಎಂದರೆ ಸರಿ . ಅವರಿಬ್ಬರ ಉತ್ತರಕ್ರಿಯಾದಿಯನ್ನು 1 ನೇ ಪ್ರತಿವಾದಿಯ ಆದಾಯದಿಂದಲೇ ಮಾಡಲಾಗಿದೆ ಎಂದರೆ ನಾವೆಲ್ಲರೂ ಸೇರಿ ಖರ್ಚು ವೆಚ್ಚಭರಿಸಿದದ್ದೇವೆ ಎಂದು ಸಾಕ್ಷಿ ಹೇಳಿದ್ದಾರೆ . ನನಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದಾಳೆ . ನನ್ನ ಮಗಳ ವಿವಾಹವನ್ನು 1 ನೇ ಪ್ರತಿವಾದಿಯು ನೆರವೇರಿಸಿದ್ದಾರೆ ಎಂದರೆ ಸರಿಯಲ್ಲ . ನಾವೆಲ್ಲರೂ ಸೇರಿ ನೆರವೇರಿಸಿದ್ದೇವೆ ಎಂದು ತಿಳಿಸಿದ್ದಾರೆ . ನನ್ನ ಮಗ ಕಿರಣ್ ರವರು ಗುಬ್ಬಿಯ ಹೀರೋ ಹೋಂಡಾದಲ್ಲಿ ಕೆಲಸ ಮಾಡು ಎಂದರೆ ಸರಿ .

2 ನೇ ಪ್ರತಿವಾದಿಗೆ ಒಬ್ಬಳು ಮಗಳು ಇದ್ದಾಳೆ ಎಂದರೆ ಸರಿ . 1 ನೇ ಪ್ರತಿವಾದಿಗೆ ಮೂವರು ಹೆಣ್ಣುಮಕ್ಕಳು ಎಂದರೆ ಸರಿ . 1 ನೇ ಪ್ರತಿವಾದಿಯು ಒಬ್ಬ ಮಗಳಿಗೆ ವಿವಾಹ ಮಾಡಿದ್ದು ಇನ್ನೂ ಇಬ್ಬರಿಗೆ ವಿವಾಹವಾಗಿಲ್ಲ ಎಂದರೆ ಸರಿ . ನನ್ನ ತಂದೆ ತಾಯಿಯ ಜೀವಿತಾವಧಿಯಲ್ಲಿಯೇ ಕುಟುಂಬದ ಸ್ವತ್ತುಗಳನ್ನು ಮೌಖಿಕವಾಗಿ ವಿಭಾಗಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ . ದಿಃ 21-10-2019 ರಂದು ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿಯು ಯಾವುದೇ ವಿಭಾಗ ಪತ್ರ ಮಾಡಿಕೊಂಡಿಲ್ಲ , 1 ನೇ ಪ್ರತಿವಾದಿಯು ಸಹಿ ಮಾಡಲು ಹೇಳಿದ ಕಾರಣ ಪತ್ರಕ್ಕೆ ಸಹಿ ಮಾಡಿದ್ದೇನೆ ಎಂದು ಹೇಳಿದ್ದಾರೆ . ನಾನು ಪ್ರತಿವಾದಿಗಳ ಬಳಿ ಕೇವಲ ಮೌಖಿಕ ವಿಭಾಗ ಮಾಡಿದ್ದೀರಿ , ನೋಂದಾಯಿತ ದಾಖಲೆ ಮಾಡಿಕೊಡಿ ಕೇಳಿದ್ದರಿಂದಲೇ ಸದರಿ ದಾಖಲೆ ನೋಂದಾಯಿಸಲಾಗಿದೆ ಎಂದರೆ ಸರಿಯಲ್ಲ . ಸುಮಾರು 5-6 ವರ್ಷಗಳಿಂದ ನಾನು ಒಟ್ಟು ಕುಟುಂಬದಿಂದ ಹೊರಬಂದು ಜೀವನ ನಡೆಸುತ್ತಿದ್ದೇನೆ ಸಾಕ್ಷಿಯು ಮುಂದುವರೆದು ನನಗೆ ಅವರು ಯಾವುದೇ ಸ್ವತ್ತು ನೀಡಿಲ್ಲ ಎಂದು ತಿಳಿಸಿದ್ದಾರೆ .ನೋಂದಾಯಿತ ವಿಭಾಗ ಪತ್ರದ ಪ್ರಕಾರ 1 ನೇ ಪ್ರತಿವಾದಿಗೆ ಸರ್ವೆ ನಂ. 324/3 ರಲ್ಲಿ 33 ಗುಂಟೆ ಸರ್ವೆ ನಂ. 324/4 ರಲ್ಲಿ ಮೂರು ಕಾಲು ಗುಂಟೆ ಸರ್ವೆ ನಂ. 324/5 ರಲ್ಲಿ ಒಂದು ಮುಕ್ಕಾಲು ಗುಂಟೆ ಮತ್ತು ಒಂದು ಶೀಟ್ ನ ಮನೆಯನ್ನು ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ . ಸರ್ವೆ ನಂ. 324/3 ರ ಸ್ವತ್ತು ವಿಭಾಗದಲ್ಲಿ ನೀಡಿದಾಗ ಖಾಲಿ ಜಮೀನು ಆಗಿತ್ತು ಎಂದರೆ ಸಾಕ್ಷಿಯು ನಾನು ಯಾವುದೇ ಸ್ವತ್ತನ್ನು ನೀಡಿಲ್ಲ , ನಾವು ಒಟ್ಟು ಕುಟುಂಬದಲ್ಲಿ ಇರುವಾಗಲೇ ಅದರಲ್ಲಿ ತೆಂಗಿನ ತೋಟ ಮಾಡಲಾಗಿದೆ ಎಂದು ತಿಳಿಸಿದ್ದಾರೆ . ಸರ್ವೆ ನಂ. 324/3 ರಲ್ಲಿ 2 ವರ್ಷದ ಅಡಿಕೆ ಗಿಡಗಳು ಇವೆ ಎಂದರೆ ಸರಿಯಲ್ಲ , 7-8 ವರ್ಷಗಳಾಗಿವೆ ಎಂದು ಸಾಕ್ಷಿ ತಿಳಿಸಿದ್ದಾರೆ . ವಿಭಾಗದ ನಂತರ 1 ನೇ ಪ್ರತಿವಾದಿಗೆ ಸದರಿ ಸ್ವತ್ತಿನಲ್ಲಿ ಅಡಿಕೆ ಗಿಡಗಳನ್ನು ಬೆಳೆಸಿದ್ದಾರೆ ಎಂದರೆ ಸರಿಯಲ್ಲ . ಸರ್ವೆ ನಂ. 324/4 ಮತ್ತು 324/5 ರ ಸ್ವತ್ತಿನಲ್ಲಿ ಖಾಲಿ ಸ್ವತ್ತುಗಳು ಎಂದರೆ ಸರಿಯಲ್ಲ . ಸರ್ವೆ ನಂ. 324/3 ರ ಸ್ವತ್ತಿನಲ್ಲಿ 1 ನೇ ಪ್ರತಿವಾದಿ RCC ಮನೆ ನಿರ್ಮಿಸಲಾಗಿದೆ ಎಂದರೆ ಸರಿ . ಸದರಿ ಸ್ವತ್ತಿನಲ್ಲಿ ಮೊದಲು ಶೀಟ್ ನ ಮನೆ ಇತ್ತು , ಅದನ್ನು ಸೇರಿಸಿ ಈಗ RCC ಮನೆ ನಿರ್ಮಿಸಿದ್ದಾರೆ ಎಂದರೆ ಸಾಕ್ಷಿಯು ಶೀಟ್ ನ ಮನೆ ಬಿಟ್ಟು ಪ್ರತ್ಯೇಕವಾಗಿ RCC ಮನೆ ನಿರ್ಮಿಸಿದ್ದಾರೆ ಎಂದು ತಿಳಿಸಿದ್ದಾರೆ . 1 ನೇ ಪ್ರತಿವಾದಿಯು ತನ್ನ ಸೇವೆಯಿಂದ ಬರುತ್ತಿದ್ದ

ಆದಾಯದಿಂದ ಸದರಿ RCC ಮನೆ ನಿರ್ಮಿಸಿದ್ದಾರೆ ಎಂದರೆ ಸರಿ, ತೋಟದ ಆದಾಯವನ್ನು ಬಳಸಿಕೊಂಡಿದ್ದಾರೆ ಎಂದರೆ ಸರಿ . ಸರ್ವೆ ನಂ. 324/4 ರಲ್ಲಿ ನನಗೆ 3 ಗುಂಟೆ ಸ್ವತ್ತು ಬಂದಿದೆ ಎಂದರೆ ಸರಿ . ಸರ್ವೆ ನಂ. 324/5 ರಲ್ಲಿ 4 ಗುಂಟೆ ಬಂದಿದೆ ಎಂದರೆ ಸರಿ . ಸರ್ವೆ ನಂ. 322/4 ಬಿ1 ರಲ್ಲಿ ಐದು ಮುಕ್ಕಾಲು ಗುಂಟೆ , ಸರ್ವೆ ನಂ. 322/3 ಬಿ1 ರಲ್ಲಿ ಆರುವರೆ ಗುಂಟೆ ಬಂದಿದೆ ಎಂದರೆ ಸರಿ . ಸದರಿ ಸ್ವತ್ತುಗಳ ಖಾತೆ ಪಹಣಿ ನನ್ನ ಹೆಸರಿಗೆ ದಾಖಲಾಗಿದೆ ಎಂದರೆ ಸರಿ . ಮೇಲೆ ಹೇಳಿದ ಆರುವರೆ ಗುಂಟೆ ಸ್ವತ್ತಿನಲ್ಲಿ ಶೀಟ್ ನ ಮನೆ ಇದೆ ಎಂದರೆ ಸರಿ . ಸದರಿ ಮನೆಯಲ್ಲಿ ನಾನು ಕುಟುಂಬ ಸಮೇತ ವಾಸಿಸುತ್ತಿದ್ದೇನೆ ಎಂದರೆ ಸರಿ . 2 ನೇ ಪ್ರತಿವಾದಿಗೆ ಸದರಿ ವಿಭಾಗದಲ್ಲಿ RCC ಮನೆ ಮತ್ತು ಶೀಟ್ ನ ಮನೆಯೊಂದು ಬಂದಿದೆ ಎಂದರೆ ಸರಿ . ಅದರಲ್ಲಿ 3 ನೇ ಪ್ರತಿವಾದಿ ವಾಸಿಸುತ್ತಿದ್ದಾರೆ ಎಂದರೆ ಸರಿ . ನನ್ನ ಭಾಗದ ಸ್ವತ್ತಿನಲ್ಲಿ ನಾನು ಬೋರ್ವೆಲ್ ಕೊರೆಸಿದ್ದೇನೆ ಎಂದರೆ ಸರಿ . 2019 ನೇ ಸಾಲಿನಲ್ಲಿ ಮಾಡಿದ ನೋಂದಾಯಿತ ವಿಭಾಗ ಪತ್ರದ ಪ್ರಕಾರ ನೀವು ಮೂವರು ಸಹೋದರರಿಗೂ ಸ್ವತ್ತುಗಳನ್ನು ನೀಡಲಾಗಿದೆ ಅದನ್ನು ಒಪ್ಪಿ ನೋಂದಾಯಿತ ವಿಭಾಗ ಪತ್ರಕ್ಕೆ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿಯು ಸಹಿ ಮಾಡಿರುವುದು ನಿಜ , 1 ನೇ ಪ್ರತಿವಾದಿಯು ಎಲ್ಲರಿಗೂ ಸಮನಾಗಿ ಭಾಗಾಂಶ ಮಾಡಲಾಗಿದೆ , ಪತ್ರಕ್ಕೆ ಸಹಿ ಮಾಡು ಎಂದು ಹೇಳಿದರು , ಆದುದರಿಂದ ಮಾಡಿದ್ದೇನೆ , ನನಗೆ ವಿಭಾಗ ಒಪ್ಪಿಗೆ ಇಲ್ಲ ಎಂದು ಸಾಕ್ಷಿ ಹೇಳಿದ್ದಾರೆ . ವಿಭಾಗ ಪತ್ರವನ್ನು ನೋಂದಾಯಿಸುವಾಗ ನರಸಿಂಹಮೂರ್ತಿ ಬಿನ್ ಅಡವೆಯಪ್ಪ ಮತ್ತು ಜಿ ಎನ್ ಅಡವಿಸ್ವಾಮಿ ಬಿನ್ ನಾರಾಯಣಪ್ಪ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ ಅವರನ್ನು ನಾನೇ ಕರೆಸಿದ್ದೆ ಎಂದರೆ ಸರಿಯಲ್ಲ .

ನನ್ನ ವಿವಾಹವಾಗಿ ಸುಮಾರು 25-30 ವರ್ಷಗಳಾಗಿವೆ . ವಿವಾಹದ ನಂತರ 2-3 ವರ್ಷಗಳವರೆಗೆ ಮನೆಯಿಂದ ಹೊರಗೆ ಜೀವನ ನಡೆಸುತ್ತಿದ್ದೆ. ಸ್ವತ್ತುಗಳಲ್ಲಿ ವಿಭಾಗ ಪಡೆಯುವ ಸಲುವಾಗಿ ಹಿಂತಿರುಗಿ ಬಂದು ನನ್ನ ತಂದೆ ತಾಯಿ ಮತ್ತು ಪ್ರತಿವಾದಿಗಳೊಡನೆ ಗಲಾಟೆ ಮಾಡಿದ್ದೇನೆ , ಆದುದರಿಂದಲೇ ಮೌಖಿಕ ವಿಭಾಗವಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಮರಣ ಹೊಂದುವವರೆಗೂ 1 ನೇ ಪ್ರತಿವಾದಿಯೊಡನೆ ವಾಸಿಸುತ್ತಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ನನ್ನೊಡನೆ ಜೀವಿಸುತ್ತಿದ್ದರು ಎಂದು ತಿಳಿಸಿದ್ದಾರೆ . 2022 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯು RCC ಮನೆ ನಿರ್ಮಿಸಿದ್ದಾರೆ ಎಂದರೆ ನಿಖರ ವರ್ಷ ತಿಳಿದಿಲ್ಲ ಎಂದು ತಿಳಿಸಿದ್ದಾರೆ . 1 ನೇ ಪ್ರತಿವಾದಿಯು RCC ಮನೆ

ನಿರ್ಮಿಸಿರುವ ಕಾರಣ ಸದರಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ದಿಃ 21-10-2019 ರ ನೋಂದಾಯಿತ ವಿಭಾಗ ಸರಿಯಾಗಿ ನಡೆದಿಲ್ಲವೆಂದು ಸುಳ್ಳು ವಿವರವನ್ನು ನಮೂದಿಸಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ವಿಭಾಗ ಪತ್ರದಲಿ ತಿಳಿಸಿರುವ ವಿವರಗಳ ಪ್ರಕಾರ ನಾನು ಮತ್ತು ಪ್ರತಿವಾದಿಗಳು ಪ್ರತ್ಯೇಕ ಸ್ವತ್ತುಗಳ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ . ಅದೇ ಪ್ರಕಾರ ನಮ್ಮ ನಮ್ಮ ಹೆಸರಿಗೆ ಪ್ರತ್ಯೇಕ ಖಾತೆಗಳಾಗಿವೆ ಮತ್ತು ಪೋಡಿ ಸಹಾ ಆಗಿದೆ ಎಂದರೆ ಸರಿ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .